**ಎಂವಿಸಿ ಸಂಖ್ಯೆಃ 792/2025 ಪಿಡಬ್ಲ್ಯೂಃ1**

**ದಿನಾಂಕಃ 20-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ಅಪಘಾತಕ್ಕೆ ಸಂಬಂಧಿಸಿದ ಪ್ರ.ವ. ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.
2. ದೂರಿನ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.
3. ಸ್ಥಳ ಪಂಚನಾಮೆಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.
4. ಶವ ತನಿಖಾ ವರದಿಯನ್ನು ನಿಪಿ-4 ಎಂದು ಗುರುತಿಸಲಾಯಿತು.
5. ಶವ ಪರೀಕ್ಷಾ ವರದಿಯನ್ನು ನಿಪಿ-5 ಎಂದು ಗುರುತಿಸಲಾಯಿತು.
6. ಐಎಂವಿ ವರದಿಯ ದೃಡೀಕೃತ ನಕಲು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.
7. ಅಂತಿಮ ವರದಿಯನ್ನು ನಿಪಿ-7 ಎಂದು ಗುರುತಿಸಲಾಯಿತು.
8. ನನ್ನ ಮೂಲ ಆಧಾರ ಕಾರ್ಡನ್ನು ನಿಪಿ-8 ಎಂದು ಗುರುತಿಸಲಾಯಿತು.
9. ಮೃತ ಸುನಂದಮ್ಮ ಇವಳ ಮೂಲ ಆಧಾರ ಕಾರ್ಡನ್ನು ನಿಪಿ-9 ಎಂದು ಗುರುತಿಸಲಾಯಿತು.
10. ನನ್ನ ಮೂಲ ಪಾನ್ ಕಾರ್ಡನ್ನು ನಿಪಿ-10 ಎಂದು ಗುರುತಿಸಲಾಯಿತು.
11. ನನ್ನ ತಮ್ಮ ಮಹೇಂದ್ರ ಈತನ ಮೂಲ ಆಧಾರ ಕಾರ್ಡನ್ನು ನಿಪಿ-11 ಎಂದು ಗುರುತಿಸಲಾಯಿತು.
12. ಮಮತಾ ಇವಳ ಮೂಲ ಆಧಾರ ಕಾರ್ಡನ್ನು ನಿಪಿ-12 ಎಂದು ಗುರುತಿಸಲಾಯಿತು.
13. ಮಹಿಮಾ ಇವಳ ಮೂಲ ಆಧಾರ ಕಾರ್ಡನ್ನು ನಿಪಿ-13 ಎಂದು ಗುರುತಿಸಲಾಯಿತು.
14. ನನ್ನ ಬ್ಯಾಂಕ್ ಖಾತೆಯ ಸ್ಟೇಟಮೆಂಟನ್ನು ನಿಪಿ-14 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಮೃತ ನನ್ನ ತಾಯಿಗೆ 2 ಜನ ಗಂಡು ಮಕ್ಕಳು 2 ಹೆಣ್ಣು ಮಕ್ಕಳು ಇರುತ್ತಾರೆ.

ಸುನಂದಮ್ಮನ ತಾಯಿ ಇರುವುದಿಲ್ಲ. ನಾವು ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಮೃತ ನನ್ನ ತಾಯಿ ವಿಶ್ರಾಂತಿಯಲ್ಲಿದ್ದು ನಾವು ಗಂಡು ಮಕ್ಕಳು ದುಡಿದು ಹಾಕುತ್ತಿದ್ದೆವು ಎಂದರೆ ಸರಿ ಅಲ್ಲ. ಸದ್ರಿ ನಮ್ಮ ತಾಯಿಯೇ ದುಡಿದು ನಮ್ಮನ್ನು ಸಾಕುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಾಯಿ ದುಡಿಮೆ ಮೇಲೆ ನಾವು ಅವಲಂಬನೆಯಾಗಿದ್ದೆವು ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ ಅಲ್ಲ.

ಕೆಎ-47-ಇ-0474 ನೇದ್ದರ ವಾಹನದಿಂದ ಅಪಘಾತ ಸಂಭವಿಸಿರುತ್ತದೆ. ಸದ್ರಿ ನನ್ನ ತಾಯಿ ವರಮಾನದ ಕುರಿತು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ನಿಜ. ನನ್ನ ತಾಯಿ ತೀರಿಕೊಂಡಾಗ ಅವರಿಗೆ 70 ವರ್ಷ ಪ್ರಾಯ ಆಗಿತ್ತು. ಹೆಚ್ಚಿನ ಪರಿಹಾರಕ್ಕಾಗಿ ನಾನು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಸದ್ರಿ 1 ನೇ ಎದುರುದಾರನ ವಾಹನ ಚಾಲಕನಿಂದ ಅಪಘಾತ ಸಂಭವಿಸಿಲ್ಲ ಚಾಲಕನಿಗೆ ಸರಿಯಾದ ದಾಖಲೆಗಳು ಇದ್ದಿರಲಿಲ್ಲ ಆದ್ದರಿಂದ ವಿಮಾ ಸಂಸ್ಥೆಯವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ